**ಗೌರವಾನ್ವಿತ 4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

ದಿಃ 14-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ MNK ವಕೀಲರಿಂದ.

**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀ AAK ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ )**

ನಾನು ಮೆಟ್ರಿಕ ಶಿಕ್ಷಣ ಪಡೆದಿರುತ್ತೇನೆ. ನಾನು ಸಂತೋಷ ಮತ್ತು ನಿರ್ಮಲ ಥೆಯಟರಿನಲ್ಲಿ 33 ವರ್ಷಗಳಿಂದ ಆಪರೇಟರ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನದು 4 ಎಕರೆ ಕೃಷಿ ಭೂಮಿ ಇರುತ್ತದೆ . ಅದರ ಸರ್ವೆ ನಂಬರ 180 ಇದ್ದು ಅದು ಕಲಖಾಂಬ ಗ್ರಾಮದಲ್ಲಿ ಇರುತ್ತದೆ . ಜಮೀನಿನ ಮಾಲೀಕ ಮತ್ತು ಸ್ವಾಧೀನದಾರರ ಹೆಸರು ಉತಾರದಲ್ಲಿ ಇರುತ್ತದೆ ಎಂದರೆ ಸರಿ.

ನಾನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷನಾಗಿದ್ದೇನೆ ಎಂದರೆ ಸರಿ . ನಾನು ಕಳೆದ 20 ವರ್ಷಗಳಿಂದ ಸದರಿ ಸಂಘದ ಅಧ್ಯಕ್ಷನಾಗಿದ್ದೇನೆ. ಈ ದಾವೆಯ ವಾದಿಯು ಸಹ ಗಣೇಶ ಮಲ್ಟಿ ಪರಪಜ ಸೊಸೈಟಿ ನಡೆಸುತ್ತಾರೆ ಎಂದರೆ ಸರಿ . ವಾದಿಯು ಸದರಿ ಸೊಸೈಟಿ 25 ವರ್ಷಗಳಿಂದ ನಡೆಸುತ್ತಿದ್ದಾರೆ. ನನ್ನ ಮತ್ತು ವಾದಿಯ ಸಂಬಂಧ ಉತ್ತಮವಾಗಿದೆ ಎಂದರೆ ಸರಿ . ನಾವಿಬ್ಬರೂ ಒಬ್ಬರಿಗೊಬ್ಬರು ಅಗತ್ಯ ಬಿದ್ದಾಗ ಸಹಾಯ ಪಡೆಯುವುದು ಮಾಡುವುದು ಇರುತ್ತದೆ. ಈ ದಾವೆಯಲ್ಲಿ ನನಗೆ ಸಾಕ್ಷಿ ನುಡಿಯಲು ವಾದಿ ಹೇಳಿರುತ್ತಾರೆ. ವಾದಿಯು ನನಗೆ ನನ್ನ ಸಾಕ್ಷಿ ಇದೆ ಎಂದು ವಕೀಲರನ್ನು ಭೇಟಿ ಮಾಡಲು ಹೇಳಿರುತ್ತಾರೆ. ನಂತರ ನಾನು ವಕೀಲರನ್ನು ಭೇಟಿ ಮಾಡಿ ನನಗೆ ಇದ್ದ ಮಾಹಿತಿಯನ್ನು ವಕೀಲರಿಗೆ ಹೇಳಿದ್ದೆ. ನಂತರ ನನ್ನನ್ನು ನ್ಯಾಯಾಲಯಕ್ಕೆ

ಕರೆತಂದಿರುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ನೀಡಿದೆ. ನಾನು ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಖರೀದಿ ಕರಾರು ಪತ್ರದ ಬಗ್ಗೆ ಮತ್ತು ವಾದಿಯು 2 ಬಾರಿ ನೀಡಿದ ಮುಂಗಡ ಹಣದ ಬಗ್ಗೆ ಬರೆದಿರುತ್ತದೆ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮೇಲೆ ಹೇಳಿದ ವಿಚಾರ ಹೊರತು ಪಡಿಸಿ ಏನು ಬರೆಯಲಾಗಿದೆ ಎಂದು ನನಗೆ ನೆನಪಿಲ್ಲ.

ಪ್ರತಿವಾದಿಯು ಕಲಖಾಂಬದಲ್ಲಿ ವಾಸಿಸುತ್ತಾರೆ ಎಂದರೆ ಸರಿ . ವಾದಿಯು ನಡೆಸುವ ಸೊಸೈಟಿಯಲ್ಲಿ ಪ್ರತಿವಾದಿಯು ಸಭಾಸದ ಮತ್ತು ಡೈರೆಕ್ಟರ ಆಗಿದ್ದರು ಎಂದರೆ ಸರಿ .ಪ್ರತಿವಾದಿಯು ನಮ್ಮ ಸಂಘದಲ್ಲಿ ಸಭಾಸದರಾಗಿರುತ್ತಾರೆ ಎಂದರೆ ಸರಿ. ನಮ್ಮ ಸಂಘದಲ್ಲಿ ಯಾರು ರೈತರಿರುತ್ತಾರೆ ಅವರನ್ನು ಮಾತ್ರ ಸಭಾಸದರನ್ನಾಗಿ ಸೇರಿಸಿಕೊಳ್ಳಲಾಗುತ್ತದೆ ಎಂದರೆ ಸರಿ . ನಮ್ಮ ಸಂಘದಲ್ಲಿ ರೈತರಿಗೆ ಸಾಲ ನೀಡಲಾಗುತ್ತದೆ ಎಂದರೆ ಸರಿ. ವಾದಿ ನಡೆಸುವ ಸಂಘದಲ್ಲಿಯೂ ರೈತರಿಗೆ ಸಾಲ ನೀಡಲಾಗುತ್ತದೆ ಎಂದರೆ ಸರಿ. ನಾವು ಲೋನ ನೀಡುವಾಗ ಫಾರ್ಮೆಟ ಮತ್ತು ಖಾಲಿ ಬಾಂಡ ಮೇಲೆ ಸಹಿ ಪಡೆಯುತ್ತೇವೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಫಾರ್ಮೆಟನ್ನು ತುಂಬಿ ಸಹಿ ಪಡೆಯಲಾಗುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂಬರ 87/6 ಎ+ಬಿ ಜಮೀನು ಪ್ರತಿವಾದಿಯ ಮಾಲೀಕತ್ವದಲ್ಲಿ ಇರುತ್ತದೆ. ಸದರಿ ಆಸ್ತಿ 1 ಎಕರೆಗಿಂತ ಹೆಚ್ಚು ಇರಬಹುದು. ನಾನು ಹೇಳುವ ಕರಾರು ದಿನಾಂಕಃ 05-03-2003 ರಂದು ಆಗಿರುತ್ತದೆ. ಸದರಿ ಕರಾರನ್ನು ಉಚಗಾಂವಕರ ಎನ್ನುವವರು ಬರೆದಿರುತ್ತಾರೆ . ಸದರಿ ಸಂದರ್ಭದಲ್ಲಿ ನಾನು ಮತ್ತು ಪಿಡಬ್ಲ್ಯೂ 1 ಮತ್ತು 3 ಹಾಜರಿದ್ದೇವು. ಸದರಿ ಕರಾರನ್ನು ಬರೆಯಲು

ಪ್ರತಿವಾದಿ ಮಾಹಿತಿ ನೀಡಿರುತ್ತಾರೆ. ಕರಾರು ಪತ್ರ ಬರೆಯುವಾಗ ಏನು ದಾಖಲೆಗಳನ್ನು ನೀಡಿದ್ದರು ಎಂಬ ಬಗ್ಗೆ ಕಲ್ಪನೆ ಇಲ್ಲ. ಕರಾರಿನ ಸಂದರ್ಭದಲ್ಲಿ ನನ್ನನ್ನು ಮತ್ತು ಪಿಡಬ್ಲೂ 3 ಯನ್ನು ವಾದಿಯೆ ಕರೆದಿದ್ದರು. ಸದರಿ ಕರಾರಿನಲ್ಲಿ 1 ಗುಂಟೆಗೆ ರೂ. 8,750-00 ಗಳಂತೆ ಮಾರಾಟ ಮಾಡಬೇಕೆಂದು ಬರೆಯಲಾಗಿರುತ್ತದೆ. ಹಾಗೆಯೇ ಸದರಿ ಕರಾರಿನಲ್ಲಿ 16 ಗುಂಟೆಗಿಂತ ಹೆಚ್ಚು ಜಾಗದ ಮಾರಾಟದ ಕುರಿತು ಬರೆಯಲಾಗಿರುತ್ತದೆ. ಕರಾರಿನ ದಿನಾಂಕಃ 05-03-2003 ರಂದು ರೂ. 50,000-00 ಗಳನ್ನು ಪ್ರತಿವಾದಿಗೆ ನೀಡಲಾಗಿರುತ್ತದೆ ಸದರಿ ಹಣವನ್ನು ಕಲಖಾಂಬದ ಚಾವಡಿಯಲ್ಲಿ ನೀಡಲಾಗಿರುತ್ತದೆ. ಸದರಿ ಕಲಖಾಂಬದ ಚಾವಡಿಯಲ್ಲಿ ಹಣ ನೀಡಿದ ಕುರಿತು ಕರಾರಿನಲ್ಲಿ ನಮೂದಿಸಿಲ್ಲ. ಕರಾರು ಆದ 1 ತಿಂಗಳು ನಂತರ ರೂ. 90,000-00 ಗಳನ್ನು ನೀಡಬೇಕೆಂದು ಬರೆಯಲಾಗಿರುತ್ತದೆ. ಉಳಿದ ಹಣವನ್ನು ಖರೀದಿ ಪತ್ರ ನೋಂದಣಿಯಾಗುವ ವೇಳೆಯಲ್ಲಿ ನೀಡಬೇಕೆಂದು ಬರೆಯಲಾಗಿದೆ.

ನಿಪಿ 1 ನ್ನು ಬರೆಯಲು ಪ್ರತಿವಾದಿಯೇ ಬಾಂಡ ಪೇಪರ ತಂದಿರುತ್ತಾರೆ. ನಾನು ನಿಪಿ 1 ರಲ್ಲಿ ಒಂದೇ ಸಹಿ ಮಾಡಿರುತ್ತೇನೆ. ನಾನು ರೂ.50,000-00 ಗಳನ್ನು ವಾದಿ ಚಾವಡಿಯಲ್ಲಿಯೇ ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರೂ.90,000-00 ಗಳನ್ನು ವಾದಿ ಬಾಂಡ ರೈಟರ ಮುಂದೆ ನೀಡಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವ್ಯವಹಾರದಲ್ಲಿ ಇಬ್ಬರ ಪರವಾಗಿಯೂ ಸಾಕ್ಷಿದಾರರು ಇರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಯು ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ತನಗೆ

ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ದಿಃ 04-04-2003 ರಂದು ಉಚಗಾಂವಕರ ಬಾಂಡ ರೈಟರ ಬಳಿ ಎಂದಿಗೂ ಬಂದಿರುವುದಿಲ್ಲ ಮತ್ತು ಯಾವುದೇ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಲೋನ ನೀಡಲು ಬರೆದುಕೊಡುವ ಖಾಲಿ ಬಾಂಡ ಪೇಪರನ್ನು ನಿಪಿ 1 ಆಗಿ ಖೊಟ್ಟಿಯಾಗಿ ತಯಾರು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 2001 ರ ಪೂರ್ವದಲ್ಲಿ ಯಾರು ಬಾಂಡ ಪೇಪರ ಖರೀದಿ ಮಾಡುತ್ತಿದ್ದರು ಅವರ ಹೆಸರು ಮಾತ್ರ ಬಾಂಡ ಪೇಪರನಲ್ಲಿ ಇರುತ್ತಿತ್ತು ಎಂದರೆ ಸರಿ . 2001 ವರೆಗೆ ಸರಕಾರ ಬಾಂಡ ಪೇಪರ ವಿತರಿಸುತ್ತಿತ್ತು ನಂತರ ಬ್ಯಾಂಕ ವತಿಯಿಂದ ಬಾಂಡ ಪೇಪರ ವಿತರಿಸಲಾಗುತ್ತದೆ ಎಂದರೆ ಸರಿ . 2007 ವರೆಗೆ ಬ್ಯಾಂಕ ಬಾಂಡ ಪೇಪರ ವಿತರಿಸುತ್ತಿದ್ದು ನಂತರ E-Stamp ಚಾಲ್ತಿಗೆ ಬಂದಿರುತ್ತದೆ ಎಂದರೆ ಸರಿ.

ನಿಪಿ 1 ಕ್ಕೆ ಬಾಂಡ ಪೇಪರ ಎಲ್ಲಿಂದ ತರಲಾಗಿರುತ್ತದೆ ಎಂದು ನನಗೆ ತಿಳಿದಿಲ್ಲ. 2003 ರಲ್ಲಿ ಪ್ರತಿವಾದಿಯ ಹೆಸರು ದಾವಾ ಆಸ್ತಿಯ ಉತಾರದಲ್ಲಿ ನಮೂದ ಆಗಿರಲಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಹಣವನ್ನು ಪಡೆದರುವುದಿಲ್ಲ ಮತ್ತು ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**